RNU AIR DHARWAD

MARCH 01, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಉತ್ತರ ಕನ್ನಡ ಜಿಲ್ಲೆಯ,** 4 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿವೆ, ಇವುಗಳಿಗೆ ಬೇಕಾದ ಎಲ್ಲ ಅಗತ್ಯ ಸೌಲಭ್ಯಗಳನ್ನು ಶೀಘ್ರದಲ್ಲಿಯೇ ಪೂರೈಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ್ ಹೇಳಿದರು. ಕ್ಯಾದಗಿಯಲ್ಲಿ 9 ಕೋಟಿ ರೂಪಾಯಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಲಾದ, ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಉದ್ಘಾಟಿಸಿ, ಅವರು ಮಾತನಾಡಿದರು. ನುರಿತ ವೈದ್ಯರು ಹಾಗೂ ಸಿಬ್ಬಂದಿ ವರ್ಗ ಇದ್ದಾಗ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು ಸಾಧ್ಯವಿದೆ ಎಂದರು.

<><><>

**ಕೇಂದ್ರ ಸರ್ಕಾರ ಜಾರಿ ತಂದಿರುವ ವಿಕಸಿತ** ಭಾರತ–ಜಿ ರಾಮ್ ಜಿ ಯೋಜನೆ ಮೂಲಕ, ಗ್ರಾಮೀಣ ಭಾಗದ ಜನರಿಗೆ 125 ದಿನಗಳ ಉದ್ಯೋಗ ಖಾತರಿ ದೊರೆಯಲಿದೆ. ಆದರೆ ಕಾಂಗ್ರೆಸ್ ಪಕ್ಷ, ಯೋಜನೆ ಕುರಿತು ಅಪಪ್ರಚಾರ ಮಾಡಿ, ದೇಶದ ಜನರಿಗೆ ತಪ್ಪು ಸಂದೇಶ ನೀಡುತ್ತಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಪ್ರಹ್ಲಾದ ಜೋಶಿ ಆರೋಪಿಸಿದ್ದಾರೆ. ಹುಬ್ಬಳ್ಳಿಯ ಅರವಿಂದ ನಗರದಲ್ಲಿರುವ, ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ವಿಕಸಿತ ಭಾರತ ರಾಮ್ ಜಿ' ಯೋಜನೆ ಕುರಿತು ಮಾತನಾಡಿದರು. ಈ ಹಿಂದೆ ಮನರೇಗಾದಲ್ಲಿ ಅನುದಾನ ಸೋರಿಕೆ ದೊಡ್ಡ ಪ್ರಮಾಣದಲ್ಲಿತ್ತು ಎಂದರು.

<><><>

**ಕೊಡಗು ಜಿಲ್ಲೆಯ ಕುಟ್ಟ ಗ್ರಾಮದಲ್ಲಿ,** ಕರ್ನಾಟಕ ಕೊಡವ ಸಾಹಿತ್ಯ ಅಕಾದೆಮಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಶಾಸಕ ಹಾಗೂ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಅವರು, ಕೊಡವ ಸಮುದಾಯದ ಸಾಧಕರಿಗೆ ವಾರ್ಷಿಕ 'ಗೌರವ ಪ್ರಶಸ್ತಿ' ಪ್ರದಾನ ಮಾಡಿ ಅಭಿನಂದಿಸಿದರು.

<><><>

**ಹುಬ್ಬಳ್ಳಿ ಧಾರವಾಡ,** ಪೊಲೀಸ್ ಆಯುಕ್ತಾಲಯ ಮತ್ತು ಧಾರವಾಡ ಜಿಲ್ಲಾ ಪೊಲೀಸ್ ಸಹಯೋಗದಲ್ಲಿ, ಇಂದು ಬೆಳಗ್ಗೆ ಹುಬ್ಬಳ್ಳಿ ತೋಳನಕೆರೆಯಿಂದ "ನಮ್ಮ ಪೊಲೀಸ್ ನಮ್ಮ ಹೆಮ್ಮೆ" ಎಂಬ ಶೀರ್ಷಿಕೆಯಡಿ, "ಫಿಟ್ನೆಸ್ ಫಾರ್ ಆಲ್" ಸಂಕಲ್ಪದೊಂದಿಗೆ ಜನಜಾಗೃತಿ ಓಟ ಆಯೋಜಿಸಲಾಯಿತು. "ಮಾದಕ ವ್ಯಸನ ಮುಕ್ತ ಕರ್ನಾಟಕ" ಮತ್ತು "ಸೈಬರ್ ಕ್ರೈಂ ಜಾಗೃತಿ" ಧ್ಯೇಯದೊಂದಿಗೆ ಆಯೋಜಿತ, ಮ್ಯಾರಥಾನ್‌ನಲ್ಲಿ ಒಟ್ಟು 6 ಸಾವಿರ ಜನರು ಪಾಲ್ಗೊಂಡಿದ್ದರು, ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ

<><><>

**ಗುಂಜನ್ ಆರ್ಯ ಧ್ವನಿ 37 ಸೆಕೆಂದುಗಳು**

<><><>

**ಬೆಂಗಳೂರು ಗ್ರಾಮಾಂತರ** ಜಿಲ್ಲೆ, ದೊಡ್ಡಬಳ್ಳಾಪುರ, ನೆಲಮಂಗಲ, ಹೊಸಕೋಟೆಯಲ್ಲಿ ಇಂದು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ, ಡ್ರಗ್ಸ್ ಮುಕ್ತ ಕರ್ನಾಟಕ ಫೋ ʼ ವಾಕ್ಯದೊಂದಿಗೆ, ಆಯೋಜಿತ 5 ಕಿಲೋ ಮೀಟರ್ ಮ್ಯಾರಥಾನ್ ಗೆ ಜಿಲ್ಲಾ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಚಾಲನೆ ನೀಡಿದರು.

<><><>

**ದೇಶದ ಪ್ರಮುಖ ಅಣು ವಿದ್ಯುತ್** ಉತ್ಪಾದನಾ ಘಟಕದಲ್ಲಿ ಒಂದಾಗಿರುವ, ಉತ್ತರ ಕನ್ನಡ ಜಿಲ್ಲೆಯ ಕೈಗಾದಲ್ಲಿ, 21 ಸಾವಿರ ಕೋಟಿ ವೆಚ್ಚದಲ್ಲಿ, 5 ಹಾಗೂ 6 ನೇ ಅಣು ವಿದ್ಯುತ್ ಘಟಕ ನಿರ್ಮಾಣವಾಗುತ್ತಿದ್ದು, ಇಂದು ಈ ಘಟಕಗಳ ನಿರ್ಮಾಣ ಕಾರ್ಯಕ್ಕೆ, ಅಣು ಶಕ್ತಿ ಆಯೋಗದ ಅಧ್ಯಕ್ಷ ಡಾಕ್ಟರ ಅಜಿತ್ ಕುಮಾರ್ ಮೊಹಂತಿ  ಚಾಲನೆ ನೀಡಿದರು.

<><><>

**ಹೊಸದಿಲ್ಲಿಯ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ,** ಪ್ರಧಾನಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ ಯೋಜನೆ, ಪಿ.ಎಂ. ರೂಸಾ ದಡಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ, ವೈಜ್ಞಾನಿಕ ಉಪಕರಣಗಳ ಕೇಂದ್ರದಲ್ಲಿ, 3 ದಿನಗಳ ಕಾರ್ಯಾಗಾರ ಆಯೋಜಿಸಿತ್ತು. 'ಅತ್ಯಾಧುನಿಕ, ವಿಶ್ಲೇಷಣಾತ್ಮಕ ಉಪಕರಣಗಳು', ಧ್ಯೇಯದ ಕಾರ್ಯಾಗಾರದಲ್ಲಿ, ಸಮಾರೋಪ ಭಾಷಣ ಮಾಡಿದ, ಹಿರಿಯ ರಸಾಯನಶಾಸ್ತ್ರಜ್ಞ, ಪ್ರೊಫೆಸರ್ ಎಸ್.ಟಿ.ನಂದಿಬೇವೂರ, ಕೃತಕ ಬುದ್ಧಮತ್ತೆ ಹಾಗೂ ನವೀನ ವೈಜ್ಞಾನಿಕ ಪರಿಕಲ್ಪನೆಗಳನ್ನು, ತಂತ್ರಜ್ಞಾನದ ನೆರವಿನಿಂದ, ಜನ ಹಿತಕ್ಕಾಗಿ, ಮೂಲವಿಜ್ಞಾನವನ್ನು ಅನ್ವಯಿಕ ವಿಜ್ಞಾನವಾಗಿ ಪರಿವರ್ತಿಸಬೇಕಿದೆ ಎಂದರು.

<><><>

**ಭಾರತದ ಸಂಸದೀಯ ರಾಜತಾಂತ್ರಿಕತೆಯನ್ನು,** ಜಾಗತಿಕ ಮಟ್ಟದಲ್ಲಿ ವಿಸ್ತರಿಸಲು, ವಿಶ್ವದ 60ಕ್ಕೂ ಅಧಿಕ ರಾಷ್ಟ್ರಗಳೊಂದಿಗೆ, ಶಾಸಕಾಂಗ ಸಂಬಂಧವನ್ನು ಬಲಪಡಿಸಲು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ರಚಿಸಿರುವ, ಯುಕ್ರೇನ್ ದೇಶದ ಸಂಸದೀಯ ಸ್ನೇಹ ಗುಂಪಿಗೆ, ದಾವಣಗೆರೆ ಸಂಸದರಾದ ಪ್ರಭಾ ಮಲ್ಲಿಕಾರ್ಜುನ, ನಾಮ ನಿರ್ದೇಶನಗೊಂಡಿದ್ದಾರೆ.

<><><>

**ಗದಗ ಜಿಲ್ಲೆ, ತಿಮ್ಮಾಪುರ ಗ್ರಾಮದ,** 850ಕ್ಕೂ ಹೆಚ್ಚು ಮಹಿಳೆಯರು, ಗೃಹಲಕ್ಷ್ಮೀ ಯೋಜನೆಯ, ಮಾಸಿಕ ಹಣ ಕೂಡಿಟ್ಟು, ಗ್ರಾಮದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ನಿರ್ಮಾಣಕ್ಕೆ, ದೇಣಿಗೆ ನೀಡಿರುವುದು, ಮಾದರಿ ಎಂದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ, ಲಕ್ಷ್ಮೀ ಹೆಬ್ಬಾಳಕರ, ಶ್ಲಾಘಿಸಿದ್ದಾರೆ. ಮಹಿಳೆಯರ ಕೈ ಬಲಪಡಿಸುವುದು ಎಂದರೆ, ಇಡೀ ಸಮಾಜವನ್ನು ಬಲಪಡಿಸುವುದು ಎಂದರ್ಥ, ಎಂದಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>